ಬೆಳೆದಿಲ್ಲ." ಇನ್ನು ಸಾಮೂಹಿಕ ನೈತಿಕ ಸೂತ್ರಗಳಾದ ದೇಶಭಕ್ತಿ, ಧರ್ಮಸಮನ್ವಯ ದೃಷ್ಟಿ, ಅಂತಾರಾಷ್ಟ್ರೀಯ ಅರಿವು ಮೊದಲಾದುವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ನಾವು ಎಷ್ಟು ಸಫಲರಾಗಿದ್ದೇವೆ? ನಮ್ಮಲ್ಲಿನ ದೈವತ್ವದ ಅಭಿವ್ಯಕ್ತಿಯೇ ಧರ್ಮ. ಇದೇ ನೀತಿಯ ನೆಲೆಗಟ್ಟು. ಕೆಟ್ಟಬೀಜ ಬಿತ್ತಿ ಒಳ್ಳೆಯ ಫಲ ಪಡೆಯುವುದು ಸಾಧ್ಯವಿಲ್ಲ. **ಶ್ರದ್ಧೆ, ಸತ್ಯನಿಷ್ಠೆ, ಪರೋಪಕಾರಬುದ್ಧಿ** ಮುಂತಾದುವೆಲ್ಲ ನೀತಿಯೇ. ಇತರರೊಂದಿಗೆ ನಮ್ಮ ವರ್ತನೆ ಸರಿಯಾಗಿ ಇರಬೇಕು. ನಾವೇ ನಮ್ಮನ್ನು ನೋಡಿಕೊಳ್ಳುತ್ತಾ, ಯೋಚಿಸುತ್ತಾ ತಿದ್ದಿಕೊಳ್ಳಬೇಕು. ತಂದೆ–ತಾಯಂದಿರು, ಉಪಾಧ್ಯಾಯರು ಮಕ್ಕಳ ನಡತೆಯನ್ನು ತಿದ್ದದೆ ಇರುವುದರಿಂದ, ಹಿಂದೆ ಇದ್ದ ಸಂಯಮದ ಪರಂಪರೆ ಈಗ ಕಣ್ಮರೆಯಾಗುತ್ತಿದೆ. ✦

# ಬಾಲ್ಯದಲ್ಲೇ ಬೆಸೆದ ಬಂಧ

**ಚಕ್ರವರ್ತಿ ಸೂಲಿಬೆಲೆ**

ಯಾರಾದರೂ ಯಾರಿಗಾದರೂ ಇಷ್ಟವಾಗೋದು ಏಕೆ? ರೂಪವಾ? ವ್ಯಕ್ತಿತ್ವವಾ? ಅಥವಾ ಇವೆಲ್ಲವನ್ನೂ ಮೀರಿದ ಅವ್ಯಕ್ತ ಶಕ್ತಿಯಾ? ಬಹುಶಃ ಕೊನೆಯದೇ ಇರಬೇಕು. ಇಲ್ಲವಾದಲ್ಲಿ ಇವೆಲ್ಲವೂ ಅರಿವಾಗುವ ಮುನ್ನವೇ ವಿವೇಕಾನಂದರು ನನಗೆ ಇಷ್ಟವಾಗಿದ್ದು ಏಕೆ? ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ. ನಾನಾಗ ಮೂರನೇ ತರಗತಿಯಲ್ಲೋ ನಾಲ್ಕನೇ ತರಗತಿಯಲ್ಲೋ ಓದುತ್ತಿದ್ದೆ. ನನ್ನ ಪುಸ್ತಕಗಳನ್ನಿಡುವ ಬೀರುವಿನ ಮೇಲೆ ಪರಿವ್ರಾಜಕ ವಿವೇಕಾನಂದರ ಚಿತ್ರವನ್ನು ಅಂಟಿಸಿದ್ದೆ. ಅವರು ಯಾರೆಂದು ಗೊತ್ತಾಗುವ ಮುನ್ನವೇ ಅವರ ಚಿತ್ರ ಮನಸ್ಸನ್ನಾವರಿಸಿಬಿಟ್ಟಿತ್ತು.

ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ಬಹುಮಾನವಾಗಿ ಪಡೆದುಕೊಂಡ 'ವೀರ ನರೇಂದ್ರ', ಸೋಮನಾಥಾನಂದಜೀಯವರ 'ಸ್ವಾಮಿ ವಿವೇಕಾನಂದ' – ಇವು ನಂತರದ ದಿನಗಳಲ್ಲಿ ಪ್ರೇರಣೆ ಕೊಟ್ಟ ಕೃತಿಗಳು. ಅದೊಮ್ಮೆ ಎಂಟನೇ ತರಗತಿಯಲ್ಲಿದ್ದಾಗ ವಿವೇಕಾನಂದರ ಜೀವನ ಕುರಿತಂತೆಯೇ ಭಾಷಣ ಮಾಡಬೇಕಿತ್ತು. ಅದು ಸ್ಪರ್ಧೆ. ನನಗಿಂತ ಮುಂಚೆ ಹೋದವರೆಲ್ಲ ಒಂದೆರಡು ನಿಮಿಷ ಮಾತಾಡಿ ಓಡಿಬರುತ್ತಿದ್ದರು. ನನಗೆ ಢವಢವ. ನಾನು ಇರುವ ಮೂರು ನಿಮಿಷಗಳಾದರೂ ಮಾತಾಡಲೇಬೇಕೆಂದು ನಿರ್ಧರಿಸಿದ್ದೆ. ನನ್ನ ಸರತಿ ಬಂದಾಗ ಮಾತು ಶುರುವಾಯ್ತು. ಎಷ್ಟು ಮಾತನಾಡಿದರೂ ಮೂರು ನಿಮಿಷ ಮುಗಿಯಲಿಲ್ಲ. ಉಪಾಧ್ಯಾಯರು 'ಬೆಲ್' ಹೊಡೆಯಲಿಲ್ಲ. ನಾನು ಬೇಸರದಿಂದ ಭಾಷಣ ಮುಗಿಸಿ ಬಂದೆ. ಸ್ವಾಮಿ ವಿವೇಕಾನಂದರ ಬಗ್ಗೆ ಮೂರು ನಿಮಿಷವೂ ಮಾತನಾಡಲಾಗಲಿಲ್ಲವೇ? ಆಮೇಲೆ ಗೊತ್ತಾಯ್ತು, ಇಪ್ಪತ್ತು ನಿಮಿಷಕ್ಕೂ ಹೆಚ್ಚು ಕಾಲ ನಾನು ಮಾತಾಡಿಬಿಟ್ಟಿದ್ದೆ. ತಡೆಯೋದು ಬೇಡವೆಂದು ಅಧ್ಯಾಪಕರೂ ಸುಮ್ಮನೆ ಕುಳಿತುಬಿಟ್ಟಿದ್ದರು. ವಿವೇಕಾನಂದರು ನನ್ನನ್ನು ಆವರಿಸಿಕೊಳ್ಳಲು ಶುರುವಾಗಿದ್ದೇ ಆಗ.

ನನ್ನ ಬದುಕಿನ ಪ್ರತಿಯೊಂದು ಘಟನೆಗೂ ವಿವೇಕಾನಂದರ ಬದುಕನ್ನು ತಾಳೆ ಹಾಕಿ ನೋಡುತ್ತಿದ್ದೆ. ನನಗೇ ಗೊತ್ತಿಲ್ಲದಂತೆ ಅವರಂತೆ ಬದುಕುವ ಹಂಬಲ ಶುರುವಾಯ್ತು. ಅದಕ್ಕೆ ಪೂರಕವಾಗಿ ಹಳ್ಳಿಯಲ್ಲಿ ಪ್ರೌಢಶಿಕ್ಷಣ ಮುಗಿಸಿ ಬೆಂಗಳೂರಿನ ಜೈನ್ ಕಾಲೇಜ್‌ಗೆ ಸೇರಿಕೊಂಡರೆ, ಉಳಿಯಲು ಅವಕಾಶ ಸಿಕ್ಕಿದ್ದು ರಾಮಕೃಷ್ಣ ವಿದ್ಯಾರ್ಥಿ ಮಂದಿರಂನಲ್ಲಿಯೇ! ಹಾಂ... ಮರೆತಿದ್ದೆ, ನಾನು ಓದಿದ ಪ್ರೌಢಶಾಲೆಯ ಹೆಸರೇ 'ವಿವೇಕಾನಂದ ಪ್ರೌಢಶಾಲೆ'. ವಿವೇಕಾನಂದರು ನನ್ನನ್ನು ಬಿಡದೆ ಬೆನ್ನು ಹತ್ತಿದ್ದರು ಅಥವಾ ನಾನೇ ಅವರ ಕೈಹಿಡಿದು ಹೆಜ್ಜೆ ಇಡುತ್ತಿದ್ದೆ. ವಿದ್ಯಾರ್ಥಿ ಮಂದಿರಂನಲ್ಲಿ ವಿವೇಕಾನಂದರ ಬಗ್ಗೆ ತಿಳಿಯಲಿಕ್ಕೆ ಸಾಕಷ್ಟು ಅವಕಾಶವಿತ್ತು. ನನ್ನ ಅಂತರಂಗದ ವಿಕಸನಕ್ಕೆ ಸಾಕಷ್ಟು ಸ್ಥಳವಿತ್ತು. ಎರಡು ವರ್ಷ ಕಳೆದು ಇಂಜಿನಿಯರಿಂಗ್ ಪದವಿಯ ಓದಿಗಾಗಿ ಉತ್ತರಕನ್ನಡಕ್ಕೆ ಹೊರಟಾಗ ಸ್ವಾಮಿ ವಿವೇಕಾನಂದರ ನುಡಿ ಒಳಗೆ ರಿಂಗಣಿಸುತ್ತಿತ್ತು. ಇಂಜಿನಿಯರಿಂಗ್ ಅಧ್ಯಯನ ಕಡಿದು ಕಟ್ಟೆಹಾಕುವ ವಿದ್ಯೆಯೇನಲ್ಲ. ಅದು ಅರಿವಾದದ್ದೇ ಅಧ್ಯಯನ ಶುರುವಾದ ಮೇಲೆ. ಹೀಗಾಗಿ ವಿವೇಕಾನಂದರು ಈ ನಾಲ್ಕು ವರ್ಷಗಳಲ್ಲಿ ಮತ್ತಷ್ಟು ಹತ್ತಿರವಾದರು. ರಾಮಕೃಷ್ಣಾಶ್ರಮದ ಸಾಧುಗಳ ಸಂಪರ್ಕದೊಂದಿಗೆ ಹೊಸ ಹೊಸ ಪುಸ್ತಕಗಳ ಅಧ್ಯಯನ ಶುರುವಾಯಿತು. ಓದುತ್ತ ಓದುತ್ತ, ಏರಬೇಕಾದ್ದು ಇನ್ನೂ ಅದೆಷ್ಟೆತ್ತರವಿದೆ ಎಂಬುದರ ಅರಿವಾಯಿತು. ಆ ವೇಳೆಗೇ, ರಾಮಕೃಷ್ಣ ವಿದ್ಯಾರ್ಥಿ ಮಂದಿರಂನಲ್ಲಿ ಕಳೆದ ದಿನಗಳ ಕುರಿತಂತೆ ಬರೆದ ಲೇಖನವೊಂದು ವಿಶ್ವವಿದ್ಯಾಲಯ ಮಟ್ಟದಲ್ಲಿ ಬಹುಮಾನ ಗಿಟ್ಟಿಸಿಬಿಟ್ಟಿತು. ಸ್ವಾಮೀಜಿಯವರ ಚಿಂತನೆಗಳಿಗೆ ಅದೆಷ್ಟು ಅದಮ್ಯ ಶಕ್ತಿಯಿದೆ ಎಂಬುದು ನನಗೆ ದೃಢವಾಗಿತ್ತು.


ಬೆಂಗಳೂರಿನ ರಾಮಕೃಷ್ಣಾಶ್ರಮದಿಂದ ತಂದ ಪುಸ್ತಕಗಳನ್ನು ಇತರರಿಗೆ ಓದಲು ಕೊಡುವ ಒಂದು ಪುಟ್ಟ ಗ್ರಂಥಾಲಯವೇ ಆಗಿತ್ತು, ನನ್ನ ಕೋಣೆ. ಆ ಕೋಣೆಯೊಳಗೆ ಪ್ರಮುಖ ಸ್ಥಾನದಲ್ಲಿ ತೂಗಿಬಿಟ್ಟಿದ್ದ ಸ್ವಾಮೀಜಿಯ ನೀಲಿ ಬಣ್ಣದ ಪೋಸ್ಟರ್ ಇಂದಿಗೂ ಕಣ್ತುಂಬುತ್ತದೆ. "ಬಡವರಿಗಾಗಿ, ಅಜ್ಞಾನಿಗಳಿಗಾಗಿ, ತುಳಿತಕ್ಕೊಳಗಾದವರಿಗಾಗಿ ಮರುಗು. ತಲೆ ಗಿರ್ರನೆ ಸುತ್ತುವವರೆಗೆ, ಹೃದಯ ಸ್ತಬ್ಧವಾಗುವವರೆಗೆ ಮರುಗು. ಆಮೇಲೆ ಭಗವಂತನೆದುರಿಗೆ ನಿನ್ನನ್ನು ಅರ್ಪಿಸಿಕೋ. ಅದಮ್ಯ ಶಕ್ತಿ ನಿನ್ನೆಡೆಗೆ ಹರಿದುಬರುತ್ತದೆ" ಎನ್ನುವ ಸ್ವಾಮೀಜಿಯವರ ವಾಕ್ಯವಿದ್ದ ಪೋಸ್ಟರ್ ಅದು. ನಿತ್ಯವೂ ಅದನ್ನು ನೋಡೀನೋಡಿ ಅದು ಜೀವನದ ಅಂಗವಾಗಿಬಿಟ್ಟಿತ್ತು. ಇಂಜಿನಿಯರಿಂಗ್ ಮುಗಿಯುವ ವೇಳೆಗೆ ಎಲ್ಲರಿಗಿಂತಲೂ ಭಿನ್ನವ್ಯಕ್ತಿಯಾಗಬೇಕೆಂಬ ತುಡಿತ, ಹಠ ಹುಟ್ಟಿದ್ದು ಸ್ವಾಮೀಜಿಯ ಪ್ರಭಾವದಿಂದಲೇ. ಎ.ಸಿ. ರೂಮುಗಳಲ್ಲಿ ಕೊಳೆತು ಹೋಗಬೇಕಿದ್ದ ಈ ದೇಹ ಸಮಾಜದೊಡನೆ ಬೆರೆಯುವಂತಾಗಿದ್ದು ವಿವೇಕಾನಂದರ ಚಿಂತನೆಯ ಕಾರಣದಿಂದಲೇ.

ಸ್ವಾಮಿ ರಂಗನಾಥಾನಂದಜಿಯವರ ಕೃಪೆಯಿಂದ ರಾಮಕೃಷ್ಣ ಪರಿವಾರಕ್ಕೆ ಸೇರಿದ ಮೇಲಂತೂ ವಿವೇಕಾನಂದರ ಸೇವೆಯೇ ಕಾಯಕವಾಗಿಬಿಟ್ಟಿತು. ಅನುಮಾನವೇ ಇಲ್ಲ. ಕಾಲೇಜು ವಿದ್ಯಾರ್ಥಿಗಳ ನಡುವೆ ನಿಂತು ಮಾತಾಡುವಾಗ ವಿವೇಕಾನಂದರು ಅವ್ಯಕ್ತ ರೂಪದಲ್ಲಿ ಆವರಿಸಿಕೊಳ್ಳುವುದನ್ನು ಅನುಭವಿಸಿಬಿಟ್ಟಿದ್ದೇನೆ ನಾನು. 'ನನ್ನದು ದೇಹವಿಲ್ಲದ ಮಾತು' ಎಂದು ಸ್ವಾಮೀಜಿ ಹೇಳುವುದನ್ನು ನಾನು ಸಾಕ್ಷೀಕರಿಸಿಕೊಂಡಿದ್ದೇನೆ. ಹಾಗಂತ ಇದು ನನ್ನೊಬ್ಬನ ಅನುಭವ ಮಾತ್ರವಲ್ಲ ಎಂಬ ಅರಿವೂ ನನಗೆ ಚೆನ್ನಾಗಿಯೇ ಇದೆ. ಕೆಲವರ ಕಾರ್ಯದಲ್ಲಿ, ಕೆಲವರ ಮಾತಲ್ಲಿ, ಕೆಲವರ ಪ್ರಭೆಯಲ್ಲಿ, ಕೆಲವರ ವ್ಯಕ್ತಿತ್ವದಲ್ಲಿ – ಹೀಗೆ ಸ್ವಾಮೀಜಿ ಬೆರೆತುಹೋಗಿದ್ದಾರೆ. ಹಾಗೇ ಸ್ವಾಮೀಜಿಯಿಂದ ಆರಿಸಲ್ಪಟ್ಟ ವ್ಯಕ್ತಿ ನಾನಾಗಿದ್ದರೆ ಸಾಕು ಎಂಬುದೇ ನನ್ನ ಬಯಕೆ. ಅದೇ ನನ್ನ ಜೀವನದ ಗುರಿ. ಅವರು ಹೇಳುವ ನೂರು ವರ್ಷಗಳ ನಂತರದ ಅವರಿಗೆ ಸೇರಿದ ಹುಡುಗರಿದ್ದಾರಲ್ಲ, ಅವರಲ್ಲಿ ನಾನೂ ಒಬ್ಬನಾದರೆ ಸಾಕು ಎಂಬ ತುಡಿತ ನನ್ನದು. ಅದಕ್ಕಾಗಿಯೇ ಈ ಎಲ್ಲ ಪ್ರಯತ್ನ; ಅದಕ್ಕಾಗಿಯೇ ಈ ಓಡಾಟ, ಸಾಧನೆ ಎಲ್ಲವೂ. ಎಲ್ಲವೂ ಆಕಾಶದಗಲ ವ್ಯಾಪಿಸಿಕೊಂಡ ಆ ಮಹಾಮಹಿಮ ದಿವ್ಯ ಶಕ್ತಿಯ ಆವಿರ್ಭಾವವನ್ನು ಬಯಸಿಯೇ ✦

# ಸ್ವಾಮಿ ವಿವೇಕಾನಂದರ ಜೀವನದರ್ಶನ – ೧

ನಿರೂಪಣೆ: ಸ್ವಾಮಿ ರಾಘವೇಶಾನಂದ ; ಅನುವಾದ : ಸಿ.ಎಸ್.ಮಂಗಳಮ್ಮ; ಮೂಲ ಕಲಾಕೃತಿ : ಪದ್ಮಾ ವಾಸನ್; ವರ್ಣಪಾರದರ್ಶಿಕೆ: ಬಿ.ಕೆ.ಸೋಮಶೇಖರ




ಏ, ನರೇಂದ್ರ! ನಿನ್ನ ತುಂಟಾಟಕ್ಕೆ ಕೊನೆಯೇ ಇಲ್ಲ. ತಾಳು, ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ.
ನರೇಂದ್ರ ಚೇಷ್ಟೆ ಮಾಡುತ್ತ ಕುಣಿದು ಕುಪ್ಪಳಿಸುತ್ತಿದ್ದ.
ಅಕ್ಕಂದಿರು ಬೆನ್ನಟ್ಟಿ ಬರದಂತೆ ಕೊಚ್ಚೆ ಚರಂಡಿಯಲ್ಲಿ ನಿಂತು ಬಿಟ್ಟ, ಎಲ್ಲರನ್ನೂ ಅಣಕಿಸುತ್ತಾ ಮುಖವನ್ನು ತಿರುಗಿಸುತ್ತಿದ್ದ.
ನಾನಿಲ್ಲಿದ್ದೀನಿ ! ಧೈರ್ಯವಿರುವವರು ಒಂದು ಶಿಕ್ಷೆ ಕೊಡಿ, ನೋಡೋಣ.
ಆ ಕೊಚ್ಚೆಗುಂಡಿಯಲ್ಲಿ ನಿಂತಿರುವವನನ್ನು ಹಿಡಿದು ಶಿಕ್ಷಿಸಲು ಅವನ ಅಕ್ಕಂದಿರಿಗೆ ಧೈರ್ಯವಾಗಲಿಲ್ಲ.
ಅವನ ಚೇಷ್ಟೆ, ತುಂಟತನವನ್ನು ತಡೆಯಲು ಅಸಾಧ್ಯವಾದಾಗ ಅವನ ತಾಯಿ, ಒಂದು ಕೊಡ ತಣ್ಣೀರು ತಂದು, ಪವಿತ್ರವಾದ ಶಿವನಾಮವನ್ನು ಜಪಿಸುತ್ತ, ಅವನ ತಲೆಯ ಮೇಲೆ ಸುರಿಯುತ್ತಿದ್ದಳು. ಶಿವನಾಮ ಕಿವಿಗೆ ಬೀಳುತ್ತಿದ್ದಂತೆಯೇ ನರೇಂದ್ರ ಗಪ್‌ಚಿಪ್! ಇದು ಅವನ ಸ್ವಭಾವದಲ್ಲಿ ಸಹಜವಾಗಿಯೇ ಇದ್ದ ಅಧ್ಯಾತ್ಮದ ಬೆಳಕನ್ನು ಸೂಚಿಸುತ್ತದೆ.
ನಾನು ಶಿವನಲ್ಲಿ ಒಂದು ಗಂಡು ಮಗುವನ್ನು ಕೊಡೆಂದು ಬೇಡಿದೆ. ಆದರೆ ಶಿವ ತನ್ನ ಭೂತಗಣಗಳಲ್ಲಿ ಒಂದನ್ನು ಕಳಿಸಿಬಿಟ್ಟಿದ್ದಾನೆ ಎಂದು ಕಾಣುತ್ತದೆ!


ಬನ್ನಿ, ಬನ್ನಿ, ತೋಟದಲ್ಲಿ ನಾವೆಲ್ಲ ಆಡೋಣ.
ನರೇಂದ್ರ ಪಶು, ಪಕ್ಷಿಗಳನ್ನು ಪ್ರೀತಿಸುತ್ತಿದ್ದ. ಬಾಲ್ಯದಿಂದಲೂ ಅವನ ಪ್ರೀತಿಗೆ ಪಾತ್ರವಾದ ಪ್ರಾಣಿಗಳೆಂದರೆ, ಒಂದು ಕೋತಿ, ಒಂದು ಮೇಕೆ, ಒಂದು ನವಿಲು, ಅನೇಕ ಪಾರಿವಾಳಗಳು ಹಾಗೂ ಪುಟಾಣಿ ಹಂದಿಗಳು.
ನರೇಂದ್ರ ತನ್ನ ತಾಯಿಯು ಹೇಳುತ್ತಿದ್ದ ರಾಮಾಯಣ ಮತ್ತು ಮಹಾಭಾರತಗಳ ಕಥೆಗಳನ್ನು ಕೇಳುತ್ತ ಕೇಳುತ್ತ ದೊಡ್ಡವನಾಗಿ ಬೆಳೆಯತೊಡಗಿದನು.
ಆರನೆಯ ವರ್ಷದಲ್ಲಿ ನರೇಂದ್ರನನ್ನು ಪ್ರಾಥಮಿಕ ಶಾಲೆಗೆ ಕಳುಹಿಸಿದರು. ತರಗತಿಯಲ್ಲಿ ಅವನು ಅತ್ಯಂತ ಬುದ್ಧಿವಂತನಾದ ವಿದ್ಯಾರ್ಥಿ ಎನಿಸಿದ್ದನು.
ನರೇಂದ್ರ, ನೀನು ಅತ್ಯಂತ ಮೇಧಾವಿ ಹಾಗೂ ಅದ್ಭುತವಾದ ಜ್ಞಾಪಕಶಕ್ತಿಯುಳ್ಳವನು.